International Journal of Kannada Research
www.kannadajournal.com

**ISSN: 2454–5813**
IJKR 2019; 5(1): 145-147
© 2019 IJKR
www.kannadajournal.com
Received: 05-11-2018
Accepted: 08-12-2018

**Muniraja HM**
Language HOD,
Kannada Department,
Bangalore North University,
Bengaluru, Karnataka, India

**Correspondence**
**Muniraja HM**
Language HOD,
Kannada Department,
Bangalore North University,
Bengaluru, Karnataka, India

# ಹೊಲೆಯರು ಎಂದರೆ ಯಾರು?

**Muniraja HM**

ಭೂಮಿಯಲ್ಲಿ ಹುಟ್ಟಿದ ನಾವುಗಳು ಎಲ್ಲಾ ಪ್ರಾಣಿಗಳಿಗಿಂತ ಮನುಷ್ಯರೆಲ್ಲರನ್ನು ಬುದ್ಧಿವಂತ ಪ್ರಾಣಿಗಳೆಂದು ಕರೆಯುತೇ_ವೆ.ಆದರೆ ಇಲ್ಲಿ ಎಷ್ಟೇಲ್ಲಾ ಭಿನ್ನ, ವ್ಯತ್ಯಾಸಗಳಿವೆ ಎಂದರೆ ಮನುಷ್ಯನ ಬಣ್ಣದಲ್ಲಿ, ವೃತ್ತಿಯಲ್ಲಿ, ಆಕಾರದಲ್ಲಿ, ವೇಷಭೂಷಣದಲ್ಲಿ, ಭಿನ್ನತೆ ಇರುವುದನ್ನೂ ನಾವುಗಳು ಕಾಣಬಹುದಾಗಿದೆ. ಪ್ರಕೃತಿಯಲ್ಲಿ ಕಾಣಬರುವ ಭೂಮಿ, ನೀರು, ಬೆಳಕು, ಗಾಳಿ, ಇವೆಲ್ಲಾವು ಇರದೆ ಇದ್ದಿದ್ದರೆ ಭೂಮಿಯಲ್ಲಿರುವ ಪ್ರತಿಯೊಂದು ಕ್ರಿಮಿ -ಕೀಟದಿಂದ ಇಡೀದು ಪ್ರಾಣಿ -ಪಕ್ಷಿ ಮತ್ತು ಮನುಷ್ಯರೆಲ್ಲಾರ ಅಸ್ತಿತ್ವ ಇರುತ್ತಿರಲಿಲ್ಲಾ. ಪಾಪ ಯಾಕೋ ? ಎನೋ? ಈ ಜಗದಲ್ಲಿ ಉನ್ನತಮಟ್ಟದವರು ಎನಿಸಿಕೊಳ್ಳುವ ಮಾನವರು ಅಲ್ಲಾ ಮನುಷ್ಯತ್ವ ಇಲ್ಲದವರು ಕೆಲವು ವ್ಯಕ್ತಿಗಳನ್ನು ಹೊಲೆಯರು, ಹೀನಕುಲದವರು, ದಲಿತರು, ಅಸ್ಪ್ರುಶ್ಯರು, ಶೋಷಿತರು, ಹರಿಜನರು, ಕೊಳೆಗೇರಿಗಳಲ್ಲಿ ವಾಸಿಸುವರು, ಊರಲ್ಲಿರುವ ಗಲೀಜನ್ನು ಸ್ವಚ್ಛಗೊಳಿಸುವರು, ಹೊಲ-ಗದ್ದೆಗಳಲ್ಲಿ ಕೆಲಸ ಮಾಡುವವರು, ದನಕರುಗಳನ್ನು ಮೇಯಿಸುವವರು, ಮರ ಕಡಿಯುವವರು, ಕುರಿ ಕಾಯುವವರು, ಸೌದೆಯನ್ನು ಸೀಳುವವರು, ಕಸಕಡ್ಡಿಗಳನ್ನು ಹೊಯ್ಯುವವರು, ಊರನ್ನು ಕಾಯುವವರು, ಮಲವನ್ನು ಸ್ವಚ್ಛಗೊಳಿಸುವವರು ಹೀಗೆ ಇನ್ನೂ ಆನೇಕ ರೀತಿಯ ಕೆಳಮಟ್ಟದ ಕೆಲಸ –ಕಾರ್ಯಗಳನ್ನು ಮಾಡಿಸಿ ಕೊಳ್ಳುತ್ತಿದ್ದರು. ಆದರೆ ಮತ್ತೆ ಅವರನ್ನು ಮನೆ ಒಳಗಡೆ ಮಾತ್ರ ಸೇರಿಸಿಕೊಳ್ಳುತ್ತಿರಲಿಲ್ಲಾ. ಬಾವಿಗಳಲ್ಲಿ ನೀರು ಸೇದುವುದಕ್ಕೆ ಬಿಡುತ್ತಿರಲಿಲ್ಲಾ, ಶಾಲೆಗಳಲ್ಲಿ ಪ್ರವೇಶ ಇರುತ್ತಿರಲಿಲ್ಲಾ, ಮೇಲ್ವರ್ಗದವರು ಬರುವಂತಹ ಹಾದಿಯಲ್ಲಿ ಬರುವಂತ್ತಿರಲಿಲ್ಲಾ, ಅಂತರ್ಜಾತಿ ವಿವಾಹ ಆಗುವಂತ್ತಿರಲಿಲ್ಲಾ, ಯಾವುದೇ ಸಮಾರಂಭ-ಕಾರ್ಯಕ್ರಮಗಳಲ್ಲಿ ಭಾಗಿ ಆಗುವಂತ್ತಿರಲಿಲ್ಲಾ, ಹೀಗೆ ನಾನಾ ರೀತಿಯಲ್ಲಿ ಗಾಂಧೀಜಿಯವರು ಹರಿಜನ ಎಂದು ಕರೆಯುವ ದಲಿತರನ್ನು ಮೇಲ್ವರ್ಗದವರು ಶೋಶಿಸುತ್ತಿದ್ದರು. ಈ ಶೋಶಣೆ ಎನ್ನುವ ಬೇಗೆಗೆ ನಲುಗಿದವರು ಡಾ.ಬಿ ಆರ್.ಅಂಬೇಡ್ಕರ್ ರವರು ಇವರು ಅನುಭವಿಸಲಾರದ ನೋವುಗಳನ್ನು, ಕಟ್ಟುಪಾಡುಗಳನ್ನು, ಬಂಧನಗಳನ್ನು, ಅನುಭವಿಸಿದವರು ಆಗಿದ್ದರು.ಇವೆಲ್ಲಾವು ಆಧುನಿಕ ಕಾಲದಲ್ಲಿ ನಡೆದಿರುವಂತಹುದು. ಆದರೆ ನಾವುಗಳು ಹಿಂದೆ ಸಮೀಕ್ಷೆ ಮಾಡಿದಾಗ ೧೬ನೇ ಶತಮಾನದಲ್ಲಿ ಪುರಂದರ ದಾಸರು ಹೊಲೆಯರು ಎಂದರೆ ಯಾರು ಎಂಬುದನ್ನು ಆ ಕಾಲದಲೇ್ಲ ಹೇಳಿರುವಂತಹುದು. ಅವರ

ಪ್ರಕಾರ ಹೊಲೆಯರೆಂದರೆ -ಊರಾಚೆ ಇರುವವರು ಹೊಲೆಯರು ಎಂದು ಕೆಲವರು ಹೇಳಿರುತ್ತಾರೆ. ಆದರೆ ನಿಜವಾದ ಹೊಲೆಯರು ಯಾರೆಂದರೆ – ಶೀಲವನ್ನು ಕೈಕೊಂಡು ನಡೆಸದವನು, ಹರಿ ಕಥೆಯನ್ನು ಕೇಳದವನು, ಆಳಾಗಿ ಅರಸನಿಗೆ ಕೇಡು ಬಯಸುವವನು, ಸೂಳೆಯನ್ನು ಕಾಮಿಸುವವನು, ಕೊಂಡ ಸಾಲವನ್ನು ಮರಳಿ ವಾಪಸ್ಸು ಕೊಡದವನು,ಲಂಡತನದಲ್ಲಿ ನರಭಂಡತನದಲ್ಲಿ ನಡೆಯುವವನು, ಉಂಡಮನೆಗೆ ಎರಡನ್ನು ಬಗೆಯುವವನು, ಹೆಂಡತಿಯ ಇಚ್ಛೆಯನ್ನು ಹರಿಯದವನು, ಇದ್ದಾಗ ದಾನಧರ್ಮವ ಮಾಡದವನು, ಮದ್ದಿಕ್ಕಿ ಕೊಲ್ಲುವವನು, ಬಧ್ಧತೆ ನಯನುಡಿ ಇಲ್ಲದವನು,ಶುಧ್ದತಾನು ಎಂದು ಹೇಳಿ ಮೊಂಡುತನದಲ್ಲಿರುವವನು,ಆಸೆ ಮಾತು ಕೊಟ್ಟು ಭಾಷೆ ತಪ್ಪುವವನು, ಒಳ್ಳೆಯ ಉಪಕಾರ ಮಾಡದವನು,ಮೋಸದಲ್ಲಿ ಕೋಪದಲ್ಲಿ ಸಂಸಾರವನ್ನು ಕೆಡಿಸಿಕೊಂಡು ಜೀವನವನ್ನು ಮಾಡುವವನು, ಹುಸಿಯನ್ನು ಹೇಳುವವನು, ತಿಳಿದು ಆಚಾರವನ್ನು ನಡೆಸದವವನು, ಪರಸತಿಯನ್ನು ಬಯಸಿದವವನು,ಗುರು ಹಿರಿಯರಿಗೆ ನಮಿಸದಿರುವವನು ಹೀಗೆ ಇನ್ನೂ ಆನೇಕ ವ್ಯಕ್ತಿಗಳು ಇವೆಲ್ಲಾವನ್ನು ಯಾರು ಪರಿಪಾಲಿಸದವರನ್ನು ಹೊಲೆಯರು ಎಂದು ಪುರಂದರದಾಸರು ತಿಳಿಯಪಡಿಸುವಂತಹುದು. ಪುರಂದರ ದಾಸರು ಹೇಳುವ ಹಾಗೆ ಹುಟ್ಟಿನಿಂದ ಜಾತಿಯನ್ನು ಗುರುತಿಸಿ ಕೀಳಾಗಿ ನೋಡದೆ, ಮನುಷ್ಯನ ಗುಣ ವರ್ತನೆಗಳಿಂದ ಹೊಲೆತನವನ್ನು ವ್ಯಾಖ್ಯಾನಿಸಬೇಕೆಂಬ ಪ್ರಗತಿಪರ ಆಲೋಚನೆಯನ್ನು ಪುರಂದರದಾಸರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. (ಕೀರ್ತನೆಗಳು ಬಿ.ಬಿ.ಎ ನಾಲ್ಕನೇ ಸೆಮೀಸ್ಟರ್)

ಹಾಗೆ ರಾಘವಾಂಕನ (ಹರಿಶ್ಚಂದ್ರ ಚರಿತ್ರೆ) ಯಲ್ಲಿ ಪ್ರಸಂಗವನ್ನು ಗಮನಿಸಿದಾಗ ಈ ಕಾವ್ಯದಲ್ಲಿ ವಿಸ್ವಾಮಿತ್ರ ರಲ್ಲಿ ಅತಿಕೋಪ, ಬಧ್ದದ್ವೇಷ, ಅನಿಮಿತ್ತವೈರ ಎಂಬಿವು ಮುನಿಗೆ ಹೊಲೆ ಇದಂತ್ವೆ ಎಂದು ಹೇಳುವರು. ಅದೇ ಚರಿತ್ರೆಯಲ್ಲಿ ವಿಸ್ವಾಮಿತ್ರನಿಗೆ ತಪಸ್ಸು ಭಂಗ ಆದುದಕ್ಕೆ ಹರಿಶ್ಚಂದ್ರನಿಗೆ ಗೋಳಾಡಿಸಲು ಇಬ್ಬರು ತರುಣಿಯರನ್ನು ಉದ್ಭವಿಸಿ ಹರಿಶ್ಚಂದ್ರನ ಬಳಿಗೆ ಕಳುಹಿಸಿದನು. ಆ ತರುಣಿಯರು ಹರಿಶ್ಚಂದ್ರನ ಬಳಿಬಂದು ಹಾಡು, ನೃತ್ಯ, ಮೈಮಾಟವನ್ನು ಬಳುಕಿಸಿದಾಗ ಹರಿಶ್ಚಂದ್ರನು ಅವರ ಎಲ್ಲಾ ಕಲೆಗಳನ್ನು ಹೊಗಳಿರುತ್ತಾನೆ. ಆಗ ಆ ತರುಣಿಯರು ನಮ್ಮನ್ನು ಮದುವೆ ಯಾಗುವಂತೆ ಕೇಳಿಕೊಳ್ಳುತ್ತಾರೆ. ಇದಕ್ಕೆಹರಿಶ್ಚಂದ್ರನು ಆ ತರುಣಿಯರನ್ನು ಈ ರೀತಿ ನಿಂದಿಸುತ್ತಾನೆ. ಆ ಸ್ತ್ರೀಯರ ಮುಂಗುರಳಲ್ಲಿ ಕೌಟಲ್ಯ, ಕಣ್ಣುಗಳಲ್ಲಿ ಚಾಂಚಲ್ಯ, ಕುಚಗಳಲ್ಲಿ ಕಾಟಿಣ್ಯ, ನಡುವಿನಲ್ಲಿ ಶಿಥಿಲತೆ, ಅಭಿನಯದಲ್ಲಿ, ಗೂಢತೆ, ಉಸಿರಿನಲ್ಲಿ ಲಾಘವ, ನಿತಂಬದಲ್ಲಿ ಕೊಬ್ಬಿನ ದರ್ಪ, ನಡಿಗೆಯಲ್ಲಿ ಜಾಡ್ಯ, ನಗೆಯಲ್ಲಿ ಮರಳು, ನುಡಿಯಲ್ಲಿ ವಕ್ರತೆ ಇದ್ದವು. ಈ ದುರ್ಗುಣಗಳಿದ್ದುದರಿಂದ ಅವರನ್ನು ಹೊಲೆತಿಯರೆಂದು ಹರಿಶ್ಚಂದ್ರನು ಕರೆಯಲ್ಪಡುತ್ತಾನೆ.

ಇನ್ನೂ ಡಾ.ಸಿದ್ದಲಿಂಗಯ್ಯನವರು ಹೊಲೆಯರು ಯಾವ ರೀತಿ ಶೋಷಣೆಗೆ ಒಳಪಟ್ಟಿದ್ದರು ಎಂಬುದನ್ನು ತಮ್ಮ ಹೊಲೆ 'ಮಾದಿಗರ ಹಾಡು 'ಎಂಬ ಕವನ ಸಂಕಲನದಲ್ಲಿ ನೋಡಬಹುದಾಗಿದೆ. ಹಸಿವಿಂದ ಸತ್ತೋರು, ಸೈಜುಗಲ್ಲು ಹೊತ್ತೋರು, ವದೆಸಿಕೊಂಡು ವರಗಿದೋರು, ಕಾಲು ಕಯ್ಯಿ ಹಿಡಿಯೋರು, ಕೈಮಡಗಿಸಿಕೊಳ್ಳೋರು, ಹೊಲವನುತ್ತು ಬಿತ್ತೋರು, ಬೆಳೆಯ ಕುಯ್ದು ಬೆವರೋರು, ಬಿಸಿಲಲ್ಲಿ ಬೇಯೋರು, ಬರಿಗೈಲೇಬಂದೋರು ಉಸ್ಸೆಂದು ಕೂತೋರು ಹೊಟ್ಟೆಬಟ್ಟೆ ಕಟ್ಟಿದ್ದೋರು ಹೀಗೆ ಹೊಲೆಯರು ಯಾವೆಲ್ಲಾ ರೀತಿಯಲ್ಲಿ ಶ್ರಮಿಸುತ್ತಿದ್ದರು ಎಂಬುದನ್ನು ಮತ್ತು ಎಷ್ಟೆಲ್ಲಾ ನೋವುಂಡರು ಎಂಬುದನ್ನು ತಿಳಿಯಬಹುದಾಗಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಪುರಂದರದಾಸರು ಹುಟ್ಟಿನಿಂದ ಜಾತಿಯನ್ನು ಗುರುತಿಸಿ ಕೀಳಾಗಿ ನೋಡದೆ, ಮನುಷ್ಯನ ಗುಣ ವರ್ತನೆಗಳಿಂದ ಹೊಲೆತನವನ್ನು ವ್ಯಾಖ್ಯಾನಿಸಬೇಕೆಂಬ ಪ್ರಗತಿಪರ ಆಲೋಚನೆಯನ್ನು ಮತ್ತು ರಾಘವಾಂಕನು ಹರಿಶ್ಚಂದ್ರ ಚರಿತ್ರೆಯಲ್ಲಿ ಹೆಣ್ಣಿನ ದುರ್ಗಣಗಳನ್ನು ಹೊಲೆತನ ಎಂದು ಕರೆಯುತ್ತಾರೆ. ಡಾ.ಸಿದ್ದಲಿಂಗಯ್ಯನವರು ಹೊಲೆಮಾದಿಗರ ಹಾಡು ಎಂಬ ಕೃತಿಯಲ್ಲಿ ಮೇಲ್ವರ್ಗದವರು ದುಡಿಸಿಕೊಳ್ಳುವುದಕ್ಕಾಗಿ ಹೊಲೆತನ ಎಂಬ ಪಟ್ಟಕಟ್ಟಿ ಅವರಿಂದ ದುಡಿಸಿಕೊಳ್ಳುತ್ತಿದ್ದರು ಎಂಬುದ್ದನ್ನು ಈ ಮೇಲಿನ ಎಲ್ಲಾ ಅಂಶಗಳಿಂದ ನಾವು ತಿಳಿದುಕೊಳ್ಳಬಹುದಾಗಿದೆ.

ಹೊಲೆಯರೆಂದರೆ - ಯಾರು ತಮ್ಮ ಗುಣಗಳಲ್ಲಿ ಕೆಟ್ಟ ವರ್ತನೆಗಳು, ದುರ್ಗಣಗಳು, ಕೆಟ್ಟ ಅಭಿಪ್ರಾಯಗಳು, ಕೆಟ್ಟನಡತೆ, ಕೆಟ್ಟನುಡಿ,ಕೆಟ್ಟ ಮಾತು, ಕೆಟ್ಟನೋಟ, ಕೆಟ್ಟಮೈಮಾಟ, ಮೈಮುರಿಯುವಂತೆ ದುಡಿಸಿಕೊಳ್ಳುವುದು, ಇವೆಲ್ಲಾವುಗಳನ್ನು ಯಾರು ರೂಢಿಗತ ಮಾಡಕೊಂಡಿರುತ್ತಾರೋ ಅಂತವರನ್ನು ಹೊಲೆಯರೆಂದು ಕರೆಯಬಹುದು ಎಂಬುದನ್ನು ಈ ಮೇಲಿನ ಎಲ್ಲರ ಅಭಿಪ್ರಾಯವಾಗಿದೆ.

**ಮೂಲ ಆಧಾರ ಗಂ್ರಥಗಳು**

1. ಸುವರ್ಣ ಸಂಪದ – ಕೀರ್ತನೆಗಳು- ಡಾ. ಸಿ.ಬಿ. ಹೊನ್ನುಸಿದ್ದಾರ್ಥ
2. ರಾಘವಾಂಕನ ಹರಿಶಂ್ಚದ್ರ ಚರಿತೆ – ಎನ್. ರಂಗನಾಥಶರ್ಮಾ
3. ದಲಿತ ಸಾಹಿತ್ಯ ದರ್ಶನ- ಡಾ. ವಿ. ಮುನಿವೆಂಕಟಪ್ಪ